ಯದ ಮೆಟ್ಟಿಲೇರಿದ್ದಾರೆ. ಉಳಿದಂತೆ ಎಲ್ಲಾ ರೂ. ಬಾಕಿ ವಸೂಲಿಗೆ ಕ್ರಮ ತೆಗೆದುಕೊಳ್ಳಲಿ
ಟಿಎಂಸಿಗಳಿಂದ ನಿಯಮಿತವಾಗಿ ಬಾಕಿ ವಸೂಲಿ ಎಂಬುದು ನಾಗರಿಕರ ಆಶಯ.

SSEC student 3rd Rank in VTU Result

# ಕಂಪ್ಯೂಟರ್ ಸೈನ್ಸ್: 3ನೇ ರ್‍ಯಾಂಕ್

**ವಿಕ ಸುದ್ದಿಲೋಕ**, ಆನೇಕಲ್

ಆನೇಕಲ್ ತಾಲೂಕಿನಲ್ಲಿರುವ ಶಿರಡಿ ಸಾಯಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಸಚಿತಾ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ 3ನೇ ರ್‍ಯಾಂಕ್ ಪಡೆದಿದ್ದಾರೆ.



ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು 12ನೇ ಘಟಿಕೋತ್ಸವ ಪ್ರಕಟಣೆಯಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳ ಹೆಸರು ಪ್ರಕಟಿಸಿದೆ. ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರುವ 196 ಕಾಲೇಜುಗಳ ವಿದ್ಯಾರ್ಥಿಗಳು ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗದಲ್ಲಿ ಪರೀಕ್ಷೆ ಬರೆದಿದ್ದರು. ಇದರಲ್ಲಿ ಶೇ 87.25 ಅಂಕ ಪಡೆದಿರುವ ಸಚಿತಾ ರಾಜ್ಯದಲ್ಲಿ 3ನೇ ರ್‍ಯಾಂಕ್ ಪಡೆದಿದ್ದಾರೆ.

"ಕಂಪ್ಯೂಟರ್ ಸೈನ್ಸ್‌ನಲ್ಲಿ ರ್‍ಯಾಂಕ್ ಗಳಿಸುವುದು ಸುಲಭವಲ್ಲ. ಆದರೂ, ಸಚಿತಾ ಕಠಿಣ ಪರಿಶ್ರಮ ಮತ್ತು ಶ್ರದ್ಧೆಯಿಂದ ವ್ಯಾಸಂಗ ಮಾಡಿ 3ನೇ ರ್‍ಯಾಂಕ್ ಗಳಿಸಿದ್ದಾಳೆ," ಎಂದು ಕಾಲೇಜಿನ ಮುಖ್ಯಸ್ಥ ಲಿಯೋ ಮುತ್ತು ಹೇಳಿದರು.